**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ  ನಂ. 554/2023**

| | | | |
|---|---|---|---|
| **ಹೆಸರು** | **:** | **ಶ್ರೀಕಾಂತ** | ಚಾ.ಸಾ. 3 |
| **ತಂದೆಯ  ಹೆಸರು** | **:** | **ಶಿವಶರಣಪ್ಪ** | ಪ್ರಾ.ಸಾ. 2 |
| **ವಯಸ್ಸು** | **:** | **35 ವರ್ಷ** | ದಿನಾಂಕಃ 20-01-2025 |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಕೊಳ್ಳೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ಮತ್ತು ಪ್ರಾಸಾ 1 ರವರು ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ.

ಈಗ ನೋಡುತ್ತಿರುವ ನಿಪಿ 1 ರ ದಾಖಲೆಯಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ 2 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರದಲ್ಲಿ ಚಾಸಾ 1 ಮತು ಪ್ರಾಸಾ 1 ರವರು ಸಹ ಇದ್ದಾರೆ. ನಿಪಿ 2 ರಲ್ಲರುವ ಇನ್ನುಳಿದ ವ್ಯಕ್ತಿಗಳನ್ನು ಪೋಲಿಸರು ಕಳ್ಳರು ಸಿಕ್ಕಿದ್ದಾರೆ ಎಂದು ಹೇಳಿ ಕರೆದುಕೊಂಡು ಬಂದಿದ್ದರು. ಆ ಸಮಯಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಪೋಲಿಸರು ಕರೆದುಕೊಂಡು ಬಂದಿರಲಿಲ್ಲ.

ಜುಲೈ 2023 ರಲ್ಲಿ ಮಧ್ಯಾಹ್ನ 2 ರಿಂದ 3 ಗಂಟೆ ಸುಮಾರಿಗೆ ಪೋಲಿಸರು ಕೊಳ್ಳೂರು ಗ್ರಾಮದ ಪರಮೇಶ್ವರ ಗುಡಿಯಲ್ಲಿ ಕಳ್ಳತನವಾದ ಬಗ್ಗೆ ಪೋಲಿಸರು ಪಂಚನಾಮೆ ಮಾಡಲು ಬಂದಾಗ ನಿಪಿ 1 ರಲ್ಲಿ ಸಹಿ ಮಾಡಿದ್ದೇನೆ. ಅದೇ ಸಮಯಕ್ಕೆ ನಿಪಿ 2 ರ ಭಾವಚಿತ್ರ ಪಡೆದಿದ್ದಾರೆ. ಆಗ ಪೋಲಿಸರು ಆರೋಪಿತರನ್ನು ತೋರಿಸಿ ಇವರೇ ಕಳ್ಳರು ಎಂದು ಹೇಳಿ ನನ್ನ ಸಹಿ ಪಡೆದಿದ್ದಾರೆ. ಈಗ ನೋಡುತ್ತಿರುವ ನಿಪಿ 3 ರ ದಾಖಲೆಯಲ್ಲಿ ನನ್ನ ಸಹಿ ಇದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿ ಸಹ ಅದೇ ದಿನ ಪರವೇಶ್ವರ ದೇವಸ್ಥಾನದಲ್ಲಿ ಮಾಡಿದ್ದೇನೆ. ಪೊಲಿಸರು ನನಗೆ ಯಾವದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ಯಾವುದೇ ವಸ್ತುಗಳು ನನ್ನ ಸಮಕ್ಷಮ ಜಪ್ತಿ ಮಾಡಿಲ್ಲ.

ಜುಲೈ 2023 ರಲ್ಲಿ ಚಾಸಾ 1 ರವರು ನನಗೆ, ಚಾಸಾ 6 ಮತ್ತು 8 ರವರಿಗೆ ಪರಮೇಶ್ವರ ದೇವಸ್ಥಾನದ ಬಾಗಿಲು ಮುರಿದು ಬೀಗವನ್ನು ಮುರಿದಿದ್ದಾರೆ ಎಂದು ಹೇಳಿದ್ದರು. ನಾನು, ಚಾಸಾ 2, ಚಾಸಾ 6 ಮತ್ತು 8

ರವರು ಸೇರಿ ದೇವಸ್ಥಾನಕ್ಕೆ ಹೋಗಿ ನೋಡಿದಾಗ ಅಲ್ಲಿ ಬೀಗ ಮುರಿದಿತ್ತು. ಆದ್ದರಿಂದ ನಾವು ಪೋಲಿಸರಿಗೆ ಘಟನೆ ಬಗ್ಗೆ ಹೇಳಿದಾಗ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ ಬಾಗಿಲು ಮುರಿದಿರುವುದು ಕಂಡುಬಂದಿರುತ್ತದೆ. ನಂತರ ಪೊಲಿಸರು ದೂರು ನೀಡಿಲು ಹೇಳಿರುತ್ತಾರೆ. ಆ ಸಮಯಕ್ಕೆ ಹುಂಡಿಯ ಬೀಗ ಸಹ ಒಡಿದಿತ್ತು. ಹುಂಡಿಯಲ್ಲಿ ಯಾವುದೇ ಹಣ ಇರಲಿಲ್ಲ ಮತ್ತು 2-3 ನಾಣ್ಯಗಳು ಇದ್ದವು. ಈ ರೀತಿ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

ನಾವು ಸದರಿ ಹುಂಡಿಯನ್ನು ಎಪ್ರಿಲ 2023 ರಲ್ಲಿ ಇಟ್ಟಿದ್ದು ಆ ದಿನದಿಂದ ಕಳ್ಳತನದ ದಿನದವರೆಗೆ ಸದರಿ ಹುಂಡಿಯನ್ನು ತೆರೆದಿರಲಿಲ್ಲ.

**ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**